ಸೈಕಲ್ ಮೂಲಕ ಸಾವಿರಾರು ಕಿಲೋ ಮೀಟರ್ ಕ್ರಮಿಸುವ ಆಸೆ ಶಿವರಾಯ ಅವರಿಗೆ ಮೂಡಿದ್ದು ಅವರೊಮ್ಮೆ ಕನ್ಯಾಕುಮಾರಿಗೆ ಭೇಟಿ ನೀಡಿದಾಗ! 'ಅಷ್ಟು ದೂರ ವೇಗದಿಂದ ಬಂದಿದ್ದರಿಂದ ಪ್ರವಾಸದಲ್ಲಿ ಸಿಗಬೇಕಾದ ವಿಶೇಷ ಅನುಭವಗಳು ದೊರಕಲಿಲ್ಲ. ಹೀಗಾಗಿ ಸೈಕಲ್ ಮೇಲೆಯೇ ದೂರದ ಒಂದು ಖ್ಯಾತ ಸ್ಥಳಕ್ಕೆ ಪ್ರವಾಸ ಹೋಗಬೇಕು; ಆ ಸ್ಥಳ ನಮಗೆ ಆದರ್ಶ ಎನಿಸುವ ಮಹನೀಯರ ಜನ್ಮಸ್ಥಳ ಆಗಿರಬೇಕು ಎಂಬ ಯೋಚನೆ ಮೂಡಿತು. ಬರೀ ಪ್ರವಾಸ ಮಾಡುವ ಬದಲಿಗೆ, ದಾರಿಯುದ್ದಕ್ಕೂ ಸಂದೇಶವೊಂದನ್ನು ಜನರ ಜತೆಗೆ ಹಂಚಿಕೊಂಡು ಹೋದರೆ ಅದು ಇನ್ನಷ್ಟು ಉಪಯುಕ್ತ ಅಂತ ಅನಿಸಿತು. ಹೀಗಾಗಿ ನೈರ್ಮಲ್ಯದ ಅಭಿಯಾನವನ್ನು ದಾರಿಯುದ್ದಕ್ಕೂ ಸಾರುವ ಯೋಜನೆ ರೂಪಿಸಿದೆ' ಎಂದು ಸೈಕಲ್ ಪ್ರವಾಸದ ಹಿಂದಿನ ಉದ್ದೇಶವನ್ನು ನೆನಪಿಸಿಕೊಳ್ಳುತ್ತಾರೆ ಶಿವರಾಯ.

ಇವರ ಮೊದಲ ಸೈಕಲ್ ಪಯಣ ಹೊರಟಿದ್ದು ಮಹಾತ್ಮ ಗಾಂಧೀಜಿ ಜನ್ಮಸ್ಥಳ ಪೋರಬಂದರಿಗೆ. ಸುಮಾರು 1500 ಕಿ.ಮೀ. ದೂರದ ಈ ಸ್ಥಳಕ್ಕೆ 2019ರಲ್ಲಿ ಶಿವರಾಯ ತೆರಳಿದರು. ಅದು 15 ದಿನಗಳ ಅವಧಿಯಲ್ಲಿ ಕ್ರಮಿಸಿದ್ದು! ಅದಾದ ಬಳಿಕ 2024ರಲ್ಲಿ ಸುಭಾಷ್ ಚಂದ್ರ ಬೋಸ್ ಜನ್ಮ ಸ್ಥಳ ಕಟಕ್ ನಗರಕ್ಕೆ ಸೈಕಲ್ ಯಾನ. ಸುಮಾರು 1600 ಕಿ.ಮೀ. ದೂರದ ಆ ಪಟ್ಟಣವನ್ನು ಎರಡು ವಾರಗಳಲ್ಲಿ ತಲುಪಿದರು. ಈ ಎರಡೂ ಪಯಣಗಳು ಯಶಸ್ವಿಯಾದ ಬಳಿಕ ಈ ವರ್ಷ ಅವರು ಆಯ್ಕೆ ಮಾಡಿಕೊಂಡಿದ್ದು ಪಂಜಾಬಿನ ಬಂಗಾ ಪಟ್ಟಣವನ್ನು. ಇದು ಸ್ವಾತಂತ್ರ್ಯಯೋಧ ಭಗತ್ ಸಿಂಗ್ ಪೂರ್ವಜರ ಊರು. ಕೊಪ್ಪಳದಿಂದ ಸುಮಾರು ಎರಡು ಸಾವಿರ ಕಿ.ಮೀ. ದೂರ ಇದೆ!

ಗುಜರಾತಿನ ಪೋರಬಂದರಿಗೆ ಸೈಕಲ್ ಹತ್ತಿದಾಗ ಶಿವರಾಯ ಅವರಿಗೆ 24 ವರ್ಷ ವಯಸ್ಸು. ಸೈಕಲ್ ತುಳಿಯುವುದು ಗೊತ್ತಿತ್ತೇ ಹೊರತು ಇನ್ನೇನೂ ಮಾಹಿತಿ ಇರಲಿಲ್ಲ. 'ನನ್ನಲ್ಲಿ ಇದ್ದಿದ್ದು ಭಂಡ ಧೈರ್ಯವೊಂದೇ! ಕಡಿಮೆ ಲಗೇಜ್ ಕಟ್ಟಿಕೊಂಡು, ಚಳಿಯಲ್ಲೂ ಬೆದರದೇ ಹೋಗಿ ಬಂದೆ. ಅದರಲ್ಲೂ ಘಟ್ಟದ ರಸ್ತೆಗಳು, ಪ್ರಾಕೃತಿಕ ನೋಟ ಖುಷಿಕೊಟ್ಟವು. ನನಗೆ ಹಿಂದಿ ಸ್ವಲ್ಪ ಮಾತ್ರ ಗೊತ್ತು. ಸೈಕಲ್ ತುಳಿಯುತ್ತ ಹೊರಟಾಗ, ಯಾರೋ ಕರೆದು ಊಟ ಮಾಡಿಸುತ್ತಿದ್ದರು; ವಸತಿ ವ್ಯವಸ್ಥೆ ಕಲ್ಪಿಸಿದರು. ನನ್ನ ಯಾತ್ರೆಯ ಉದ್ದೇಶ ಕೇಳಿ ಬೆನ್ನು ತಟ್ಟಿದರು; ಸಾವಿರಾರು ಕಿಲೋ ಮೀಟರ್ ಸೈಕಲ್ಲಿನಲ್ಲೇ ಹೊರಟ ಸಾಹಸ ಕೇಳಿ ಬೆರಗಾದರು. ನಾನು ಮನಸಾರೆ ಇಷ್ಟಪಟ್ಟ ಪ್ರವಾಸ ಅದು' ಎಂದು ನೆನಪಿಸಿಕೊಳ್ಳುತ್ತಾರೆ.

ಪೋರಬಂದರ್ ಪ್ರಯಾಣದ ಅನುಭವಗಳಿಂದ ಮತ್ತೊಂದು ಯಾನಕ್ಕೆ ಸಿದ್ಧವಾದರು. ಈ ಸಲ ಸುಭಾಷ ಚಂದ್ರ ಬೋಸ್ ಜನ್ಮ ಸ್ಥಳ, ಒಡಿಶಾದ ಕಟಕ್ ನಗರ ಅವರ ಗುರಿಯಾಗಿತ್ತು. ಈ ಎರಡನೇ ಯಾನಕ್ಕೆ ಜತೆಗೂಡಿದ್ದು ಅವರ ಮಿತ್ರ, ಹೂವಿನಹಡಗಲಿ ತಾಲ್ಲೂಕಿನ ಮುದೇನೂರಿನ ನವೀನ ಕುಮಾರ್, ಇವರು ರಂಗಕರ್ಮಿ.



ಸಾಹಸ ಯಾನಕ್ಕೆ ಹಾದಿಯಲ್ಲಿ ಸಿಕ್ಕವರ ಹಾರೈಕೆ

ಹಿಂದಿನ ಬಾರಿ ಕರ್ನಾಟಕದಿಂದ ಎಡಭಾಗಕ್ಕೆ ತೆರಳಿದ್ದ ಅವರೀಗ, ಬಲಭಾಗದತ್ತ ಹೊರಟರು. ಈ ಅನುಭವ ವಿಭಿನ್ನ. ಆಹಾರ ಪದ್ಧತಿ, ವಸತಿ, ದಾರಿಯುದ್ದಕ್ಕೂ ಸಿಗುವ ಜನರ ಭಾವನೆಗಳು ಬೇರೆಯದೇ ಅನುಭವ ಕೊಟ್ಟವು. 16 ದಿನಗಳಲ್ಲಿ ಶಿವರಾಯ ಹಾಗೂ ನವೀನ ಕುಮಾರ್ ಕಟಕ್ ನಗರ ತಲುಪಿದರು.

## ಹ್ಯಾಟ್ರಿಕ್ ಸಂಭ್ರಮ

ಎರಡು ಬಾರಿಯ ಯಶಸ್ವಿ ಪ್ರವಾಸದ ಅನುಭವದ ಮೂಟೆ ಇವರಲ್ಲಿತ್ತು. ಅದೇ ವಿಶ್ವಾಸದಲ್ಲಿ ಈ ಸಲ ಭಗತ್ ಸಿಂಗ್ ಕುಟುಂಬದ ಊರು ಪಂಜಾಬಿನ ಬಂಗಾ ಪಟ್ಟಣವನ್ನು ಸೈಕಲ್ ಯಾನಕ್ಕೆ ಆಯ್ಕೆ ಮಾಡಿಕೊಂಡರು. 'ಮಹಾರಾಷ್ಟ್ರದ ಘಟ್ಟ ಪ್ರದೇಶದಲ್ಲಿ ಭಾರಿ ಪ್ರಮಾಣದ ವಾಹನಗಳು ಮೈಗೆ ಅಂಟಿಕೊಂಡು ಸಾಗುವಾಗ ಭಯ ಆಯಿತು. ಕೆಲವು ಸಲ ಕೂದಲೆಳೆಯಲ್ಲಿ ಪ್ರಾಣಾಪಾಯದಿಂದ ಪಾರಾದೆ. ಅಲ್ಲಲ್ಲಿ ಊಟಕ್ಕೆ ತೊಂದರೆಯಾಯಿತು. ವಿಪರೀತ ಚಳಿ ಹಾಗೂ ಮಂಜು' ಎಂದು ಅನುಭವ ತೆರೆದಿಡುತ್ತಾರೆ.

ಕೊಪ್ಪಳದಿಂದ ಮಹಾರಾಷ್ಟ್ರ, ಮಧ್ಯಪ್ರದೇಶ, ರಾಜಸ್ಥಾನ, ಹರಿಯಾಣ ಮೂಲಕ ಪಂಜಾಬ್ ಪ್ರವೇಶಿಸಿದ ಇವರಿಬ್ಬರೂ ನಿತ್ಯ ಸುಮಾರು 150 ಕಿ.ಮೀ. ದೂರ ಕ್ರಮಿಸುತ್ತಿದ್ದರು. ರಾತ್ರಿ ಪೆಟ್ರೋಲ್ ಬಂಕ್, ದೇವಸ್ಥಾನದಲ್ಲಿ ವಾಸ್ತವ್ಯ. ಕಾಳುಗಳನ್ನು ರಾತ್ರಿಯಿಡೀ ನೆನೆಸಿ, ಮರುದಿನ ಸೇವಿಸುವುದು, ಹಸಿ ತರಕಾರಿಯನ್ನು ಊಟದ ಜತೆ ಬಳಸುವುದು ಇವರ ಶರೀರ ಸದೃಢವಾಗಿರಲು ಸಹಕಾರಿಯಾಯಿತು. ಉಳಿದಂತೆ ಅಲ್ಲಲ್ಲಿ ರಸ್ತೆ ಬದಿಯ ಹಳ್ಳಿಗಳ ಜನರು ಬಿಸಿಬಿಸಿ ಅಡುಗೆ ಮಾಡಿ, ಊಟ ಮಾಡಿಸಿದ್ದೂ ಇದೆ. ಪೆಟ್ರೋಲ್ ಬಂಕುಗಳಲ್ಲಿ ಜಾಗ ಸಿಗದೇ ಪರದಾಡಿದ್ದೂ ಇದೆ.

ಈ ಸಲದ ಯಾನದಲ್ಲಿ ಹವಾಮಾನ ವೈಪರೀತ್ಯ ವಿಪರೀತ ಎನಿಸುವಷ್ಟು ಕಾಡಿತು. ಕರ್ನಾಟಕ ಹಾಗೂ ಮಹಾರಾಷ್ಟ್ರದ ಆರಂಭದಲ್ಲಿ ಒಳ್ಳೆಯ ಹವಾಮಾನ ಇತ್ತು, ಮುಂದೆ ಸಾಗಿದಂತೆಲ್ಲ ಮೈನಡುಗುವಷ್ಟು ಚಳಿ. ಮೂರು ಪ್ಯಾಂಟ್, ಅಂಗಿ, ಜರ್ಕಿನ್ ಹಾಕಿಯೇ ಸೈಕಲ್ ತುಳಿದರೂ ತಡೆಯಲಾಗದ ಚಳಿ. ಇದರ ಮಧ್ಯೆ ಡಾಬಾದಲ್ಲಿರುವ ಟ್ಯಾಂಕ್, ತೋಟದ ಪಂಪ್ ಸೆಟ್ ನೀರಿನಲ್ಲಿ ಸ್ನಾನ ಮುಗಿಸಿ, ಮುನ್ನಡೆದರು. 'ಒಂದರ್ಥದಲ್ಲಿ ನಮ್ಮದು ಅಲೆಮಾರಿಗಳ ತರಹದ ಜೀವನ' ಎಂಬುದು ನವೀನ್ ಬಣ್ಣನೆ.

ಅಂದುಕೊಂಡಿದ್ದಕ್ಕಿಂತ ನಾಲ್ಕು ದಿನ ಮುಂಚಿತವಾಗಿಯೇ ಪಂಜಾಬಿನ ಬಂಗಾ ತಲುಪಿದಾಗ ಇಬ್ಬರಲ್ಲೂ ಸಂಭ್ರಮ. ಭಗತ್ ಸಿಂಗ್ ಸ್ಮಾರಕದ ಎದುರು ನಿಂತು ಮಿತ್ರರಿಗೆ ವಿಡಿಯೊ ಕರೆ ಮಾಡಿ ಸಂತಸ ಹಂಚಿಕೊಂಡರು. 'ಕೊಪ್ಪಳದಿಂದ ಸಾವಿರಾರು ದೂರವನ್ನು ಸೈಕಲ್ ತುಳಿಯುತ್ತಲೇ ಕ್ರಮಿಸಿದೆವಾ ಅಂತ ನಮಗೇ ಅಚ್ಚರಿ. ಖುಷಿಗಿಂತ ಹೆಚ್ಚು ರೋಮಾಂಚನ ಆಯಿತು' ಎಂದು ಶಿವರಾಯ ಹೇಳಿದರೆ, 'ಅದೊಂದು ಭಾವನಾತ್ಮಕ ಗಳಿಗೆ. ಎಷ್ಟೇ ಕಷ್ಟವಿದ್ದರೂ ಅದನ್ನೆಲ್ಲ ಮೀರಿ, ನಮ್ಮ ದೇಶದ ಮಹಾನ್ ಕ್ರಾಂತಿಕಾರಿಯ ಕುಟುಂಬದ ಮನೆ ತಲುಪಿದೆವು' ಎಂದು ನವೀನ್ ಖುಷಿ ಹಂಚಿಕೊಂಡರು.

ಹಗಲು ಹೊತ್ತು ಯಾನ ಶುರು ಮಾಡಿದರೆ, ಮಧ್ಯಾಹ್ನವಷ್ಟೇ ತುಸು ವಿರಾಮ. ಸಂಜೆ ಹೊತ್ತು ಬೇಗನೇ ಕತ್ತಲು ಕವಿದಾಗ ಲೈಟ್ ನೆರವಿನಲ್ಲಿ ಪ್ರಯಾಣ ಮುಂದುವರಿಯುತ್ತಿತ್ತು. ರಾತ್ರಿ ಅವಕಾಶ ಸಿಕ್ಕ ಕಡೆ ವಸತಿ. 'ನಮ್ಮ ಪ್ರಯಾಣದ ಬಗ್ಗೆ ತಿಳಿಯಲು ಮಿತ್ರರು ಮಾತ್ರವಲ್ಲದೇ ಸರ್ಕಾರಿ ನೌಕರರ ಸಂಘ, ಕೊಪ್ಪಳ ಗಾಂಧಿ ಬಳಗ ನಿತ್ಯವೂ ಕಾತರದಿಂದ ಕಾಯುತ್ತಿತ್ತು. ಅವರ ಕುತೂಹಲದ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದೆವು. ಅವರೆಲ್ಲರ ಕಾಳಜಿಯು ನಮಗೆ ಬೆಚ್ಚನೆಯ ಭಾವ ಕೊಟ್ಟಿತು' ಎಂದು ಶಿವರಾಯ ಸ್ಮರಿಸಿಕೊಂಡರು.

ಪ್ರವಾಸದಲ್ಲಿ ಹಲವು ಮರೆಯಲಾಗದ ಘಟನೆಗಳು ಶಿವರಾಯ, ನವೀನ್ ಮನದಲ್ಲಿ ಅಚ್ಚೊತ್ತಿವೆ. ಹರಿಯಾಣದಲ್ಲಿ ಸಾಗುತ್ತಿದ್ದಾಗ ಕೂಲಿ ಕಾರ್ಮಿಕರ ಕುಟುಂಬವೊಂದು ಇವರನ್ನು ನಿಲ್ಲಿಸಿ, ಪ್ರಯಾಣದ ಕುರಿತು ವಿಚಾರಿಸಿತು. ಕರ್ನಾಟಕದಿಂದ ಪಂಜಾಬಿಗೆ ಸೈಕಲ್ಲಿನಲ್ಲಿ ಹೊರಟ ಸಂಗತಿ ತಿಳಿದು 'ಬಾಪ್ ರೇ!' ಎಂದು ಯಜಮಾನ ಉದ್ಗರಿಸಿದ. 'ನಮ್ಮ ಉದ್ದೇಶ ತಿಳಿದು, ತಮ್ಮಲ್ಲಿಯೇ ಉಳಿಯುವಂತೆ ಒತ್ತಾಯಿಸಿದರು. ಅವರದು ತೀರಾ ಚಿಕ್ಕ ಕೊಠಡಿ. ನಮಗಾಗಿ ಅದನ್ನೇ ಬಿಟ್ಟುಕೊಟ್ಟರು. ಬಿಸಿ ಅಡುಗೆ ಮಾಡಿ, ಹೊಟ್ಟೆ ತುಂಬಾ ಊಟ ಮಾಡಿಸಿದರು' ಎಂದು ಶಿವರಾಯ ಭಾವುಕರಾಗಿ ವಿವರಿಸಿದರು.